ದಿನಾಂಕ 05-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ **2** ನೇ ಆರೋಪಿ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದ

1. ದೂರನ್ನು ನೀಡುವ ಎಷ್ಟು ದಿನ ಮುಂಚೆ ದೂರನ್ನು ನೀಡಬೇಕು ಎಂದು ಯೋಚನೆ ಮಾಡಿದ್ದೀರಿ ಎಂದರೆ ಸಾಕ್ಷಿಯು ಪತ್ರದಲ್ಲಿ ಅವಹೇಳನಕಾರಿ ಪ್ರಚಾರ ಬಂದನಂತರ ನಾನು ಕೆಲವು ದಿನಗಳ ಕಾಲ ಖಿನ್ನತೆಗೆ ಒಳಗಾಗಿದ್ದೆ ನಂತರ ಹೋಗಿ ದೂರನ್ನು ನೀಡಿರುತ್ತೇನೆ. ನಾನು ದೂರನ್ನು ನೀಡುವ ಪೂರ್ವದಲ್ಲಿ ನನ್ನ ತಂದೆ, ತಾಯಿ, ಅಣ್ಣ , ತಮ್ಮ ರವರಲ್ಲಿ ಚರ್ಚಿಸಿರುತ್ತೇನೆ. ನಾನು ಚರ್ಚಿಸಿ ತುಂಬಾ ಯೋಚನೆ ಮಾಡಿಯೇ ದೂರನ್ನು ನೀಡಿರುತ್ತೇನೆ. ನಿಪಿ 1 ದೂರು ನನ್ನ ಹಸ್ತಾಕ್ಷರದಲ್ಲಿ ಇದೆ. ದೂರಿನಲ್ಲಿ ಶ್ರೀ ಪಿ ಪಿ ಹೆಗ್ಡೆ ರವರ ಬಗ್ಗೆ ಆಪಾದನೆ ಮಾಡಿರುತ್ತೇನೆ. ಸದರಿ ಆಪಾದನೆ ಸರಿ ಅಲ್ಲ ಎಂದು ಅವರ ಮೇಲೆ ಪೊಲೀಸರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ.

2. ದೂರಿನಲ್ಲಿ ನಮೂದಿಸಿರುವ 4 ಮೊಬೈಲ್ ಸಂಖ್ಯೆಗಳಿಂದ ನನಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿರುತ್ತಾರೆ ಅದನ್ನು ನಾನು ಯೋಚನೆ ಮಾಡಿಯೇ ಅವರ ನಂಬ್ರಗಳನ್ನು ನಮೂದಿಸಿರುತ್ತೇನೆ. ಸದರಿ ನಂಬರುಗಳಿಂದ ಒಂದೆರಡು ಸಲ ನನಗೆ ಸಂದೇಶಗಳನ್ನು ಕಳುಹಿಸಿರಬಹುದು. ಸದರಿ ಸಂದೇಶಗಳ ಪ್ರಿಂಟ್ ಔಟನ್ನು ತೆಗೆದು ಪೊಲೀಸರಿಗೆ ನೀಡಿರುತ್ತೇನೆ. ನಾನು ದೂರು ನೀಡುವ ಅಂದಾಜು 15 ದಿನಗಳ ಪೂರ್ವದಲ್ಲಿ ಅಶ್ಲೀಲ ಸಂದೇಶಗಳನ್ನು ಕಳುಹಿಸಿರುತ್ತಾರೆ. ನಾನು ಸದರಿ 4 ನಂಬರುಗಳಿಗೂ ನೀವು ಯಾರು, ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ಒಂದೇ ಬಾರಿಗೆ ಕೇಳಿರುತ್ತೇನೆ. ಆಗ ಅವರು ನಿಮ್ಮ ಬಗ್ಗೆ ಜಾಲತಾಣದಲ್ಲಿ ಕೆಟ್ಟದಾಗಿ ಪ್ರಚಾರವಾಗುತ್ತಿದೆ ಅದರ ಬಗ್ಗೆ ನೀವು ಕ್ರಮಕೈಗೊಳ್ಳಿ ಎಂದು ನಿಮಗೆ ತಿಳಿಸಲು ಕಳುಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಈವರೆಗೂ ಸದರಿ 4 ನಂಬರುಗಳು ಯಾರದ್ದು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಅವರನ್ನು ಕರೆದು ವಿಚಾರಣೆ ಮಾಡಿ ಅವರನ್ನು ಸಾಕ್ಷಿಗಳನ್ನಾಗಿ ಮಾಡಿರುವುದು ದೋಷಾರೋಪಣಾ ಪಟ್ಟಿಯಲ್ಲಿ ನೋಡಿರುತ್ತೇನೆ.

3. ನನಗೆ ಗೊತ್ತಿಲ್ಲದ ಮೊಬೈಲ್ ನಂಬರುಗಳಿಂದ ಬಂದ ಸಂದೇಶಗಳಿಗೆ ಸಂಬಂಧಪಟ್ಟು ನಾನು ಅವರೊಂದಿಗೆ ಯಾವುದೇ ಸಂಭಾಷಣೆ ಮಾಡುತ್ತಿರಲಿಲ್ಲ. ನಾನು ಈವರೆಗೂ

ಯಾವುದೇ ಗೊತ್ತಿಲ್ಲದ ಮೊಬೈಲ್ ಸಂಖ್ಯೆಯಲ್ಲಿ (ಅನ್ ನೋನ್ ನಂಬ್ರ) ವಾರಗಟ್ಟಲೆ, ತಿಂಗಳುಗಟ್ಟಲೆ ಸಂಭಾಷಣೆ ಮಾಡಿರುವುದಿಲ್ಲ. ಅನ್ ನೋನ್ ನಂಬರಿನಿಂದ ಯಾವುದಾದರೂ ಅಶ್ಲೀಲ ಸಂದೇಶ ಬಂದರೆ ಸದರಿ ನಂಬರನ್ನುಬ್ಲಾಕ್ ಮಾಡುವ ಅ,ಬ್ಯಾಸ ಇಟುಟಕೊಂಡಿರುವುದಿಲ್ಲ, ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡುತ್ತೇನೆ.

4. 2 ನೇ ಆರೋಪಿಯು ಮಂಗಳೂರಿನಲ್ಲಿ 25 ವರ್ಷಗಳಿಂದಲೂ ಹೆಚ್ಚು ಕಾಲದಿಂದ ವಕೀಲ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. 2 ನೇ ಆರೋಪಿಯು ಯಾರ ಕಿರಿಯ ವಕೀಲರಾಗಿ ಹಾಗೂ ಸ್ವತಂತ್ರವಾಗಿ ಎಷ್ಟು ವರ್ಷದಿಂದ ವಕೀಲಿ ವೃತ್ತಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿಯನ್ನು ನಾನು ಪ್ರಥಮವಾಗಿ ನ್ಯಾಯಾಲಯದಲ್ಲಿ ನೋಡಿರುತ್ತೇನೆ. 2 ನೇ ಆರೋಪಿಗೆ ಸೇರಿದೆ ಎಂದು ಹೇಳುವ ಮೊಬೈಲ್ ಸಂಖ್ಯೆಯಿಂದ ಸಂಭಾಷಣೆ ಪ್ರಥಮವಾಗಿ 2014 ರ ಡಿಸೆಂಬರ್ 25 ರಿಂದ ಫ್ರಾರಂಭವಾಗಿರುತ್ತದೆ. ನಿಪಿ 1 ದೂರನ್ನು ನೀಡಿದ 6 ತಿಂಗಳ ನಂತರ ಸಂಭಾಷಣೆ ಫ್ರಾರಂಭವಾಗಿರುತ್ತದೆ. ಸದರಿ ಸಂಭಾಷಣೆಯು ಸುಮಾರು 3 ತಿಂಗಳು ನಡೆದಿರುತ್ತದೆ. ಸದರಿ ಸಂಭಾಷಣೆಯ ಅವಧಿಯಲ್ಲಿ ಯಾವುದಾದರೂ ಅಶ್ಲೀಲ ಸಂದೇಶ ಬಂದ ಬಗ್ಗೆ ದುೂರನ್ನು ನೀಡಿದ್ದೀರಾ ಎಂದೇ ಸಾಕ್ಷಿಯು ಸದರಿ ಅವಧಿಯಲ್ಲಿ ನೀಡಿರುವುದಿಲ್ಲ ಆದರೆ ಸೂಕ್ತ ಸಮಯಕ್ಕೆ ಕಾಯುತ್ತಿದ್ದೆ. ಸದರಿ ಸಂಖ್ಯೆಯಿಂದ ಸಂದೇಶ ಕಳುಹಿಸಿದ್ದ ವ್ಯಕ್ತಿ 2 ನೇ ಆರೋಪಿಯೇ ಎಂದು ನನಗೆ ಮಾರ್ಚ್ ತಿಂಗಳ ನಂತರ ಗೊತ್ತಾಗಿರುತ್ತದೆ. ಅಂದರೆ ನಾನು ದೂರನ್ನು ನೀಡುವ ಅಂದಾಜು 15 ದಿನಗಳ ಮೊದಲು ಗೊತ್ತಾಗಿರುತ್ತದೆ.

5. ನಿಮ್ಮ ಸಂಭಾಷಣೆಯಲ್ಲಿ ದಿನಾಂಕ 04-01-2014 ರಂದು ಬೆಳಿಗ್ಗೆ 11.21 ಸಮಯಕ್ಕೆ 9886267052 ನಂಬರಿನಿಂದ ನೀವಲ್ಲವೇ ನನಗೆ ಮೊದಲು ಸಂದೇಶ ಕಳುಹಿಸಿದ್ದು ಎಂದು ಕೇಳಿದ್ದು , ಅದಕ್ಕೆ ನಾನು ಅದೇ ದಿನ 11.24 ಗಂಟೆಗೆ ನಾನು ಮೊದಲು ನಿಮ್ಮ ಬಗ್ಗೆ ವಿಚಾರ ಕೇಳಿ ಮೆಸೇಜು ಮಾಡಿದ್ದು ಅಪರಾಧವಾ ಎಂದು ಕೇಳಿರುತ್ತೀರಿ ಎಂದರೆ ಸಾಕ್ಷಿಯು ನಾನು ನಿಮ್ಮ ಬಗ್ಗೆ ಮಾಹಿತಿಯನ್ನು ಮೊದಲು ಕೇಳಿದ್ದು ತಪ್ಪಾ ಎಂದು ಕೇಳಿರುತ್ತೇನೆ. ನಿಮ್ಮ ಸಂಭಾಷಣೆಯ ದಾಖಲೆ ನಿಪಿ 5 ರಲ್ಲಿ ನೀವು ಕಳುಹಿಸಿದ ಕೆಲವೊಂದು ವೀಡಿಯೋಗಳು ಒಮಿಟ್ ಎಂದು ತೋರಿಸುತ್ತಿದ್ದು ಅದು ಯಾವ ಫೋಟೋ ಎಂದರೆ ಸಾಕ್ಷಿಯು ಅದು ನನ್ನ ಮಕ್ಕಳ ಫೋಟೋ ಆಗಿರುತ್ತದೆ. ಸದರಿ ಸಂಭಾಷಣೆಯಲ್ಲಿ ನನ್ನನ್ನು ರೆಸಾರ್ಟಗೆ ಬಾ ಮತ್ತು ಪದೇ ಪದೇ ನನ್ನ ಬಳಿ ಕೇಳಬೇಕು

ಎಂದು ಕಳುಹಿಸಿರುವುದು ಅಶ್ಲೀಲ ಸಂಭಾಷಣೆ ಆಗಿರುತ್ತದೆ. ರೆಸಾರ್ಟ್‌ಗೆ ಬಾ ಎಂದು ಸಂದೇಶ ಬಂದ ತಕ್ಷಣ ನಾನು ದೂರನ್ನು ನೀಡಿರುವುದಿಲ್ಲ. ನಿಪಿ 5 ರಲ್ಲಿ ಎಲ್ಲಿಯೂ ಅಶ್ಲೀಲವಾದ ಸಂಭಾಷಣೆ ಇಲ್ಲ ಎಂದರೆ ಸರಿಯಲ್ಲ. ಅಶ್ಲೀಲವಾದ ಸಂಭಾಷಣೆ ಬಂದಿದ್ದಲ್ಲಿ ಸದರಿ ಸದರಿ ನಂಬರು ಹಾಗೂ ಅದರ ವ್ಯಕ್ತಿಯ ವಿರುದ್ಧ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕ 26-04-2014 ರಂದು ನೀಡಿದ ನಿಪಿ 1 ದೂರಿನಲ್ಲಿ 2 ನೇ ಆರೋಪಿಯ ಬಗ್ಗೆಯಾಗಲೀ ನಿಪಿ 5 ರಲ್ಲಿ ತಿಳಿಸಿರುವ ಮೊಬೈಲ್ ಸಂಖ್ಯೆಬಗ್ಗೆಯಾಗಲೀ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ನಿಪಿ 1 ದುಾರು ನೀಡಿದ ನಂತರ ಸದರಿ ದೂರಿನಲ್ಲಿ 2 ನೇ ಆರೋಪಿ ಬಗ್ಗೆಯಾಗಲೀ ನಿಪಿ 5 ರಲ್ಲಿ ತೋರಿಸಿದ ಮೊಾಬೈಲ್ ಸಂಖ್ಯೆಯನ್ನು ಬಿಟ್ಟಿರುತ್ತೇನೆ ಎಂದು ಹಾಗೂ ಅದನ್ನು ನೀಡಬೇಕು ಎಂದು ನಿಮಗೆ ಯಾವಾಗಲಾದರೂ ನೀಡಬೇಕು ಎಂದು ಯೋಚನೆ ಬಂತಾ ಎಂದರೆ ಸಾಕ್ಷಿ ನನಗೆ ಯೋಚನೆ ಬಂದಿಲ್ಲ ಆದರೆ 2 ನೇ ಆರೋಪಿಯುು 1 ನೇ ಆರೋಪಿಯೊಂದಿಗೆ ಸೇರಿಕೊಂಡು ನನ್ನ ವಾಟ್ಸ್ ಮೊಬೈಲ್ ನ ಡಿಪಿ ಹಾಗುಾ ನನ್ನ ವಿವರಗಳನ್ನು ಪಡೆದುಕೊಂಡು 1 ನೇ ಆರೋಪಿಗೆ ನೀಡಿರುತ್ತಾನೆ ಎಂದು ಗೊತ್ತಾದ ನಂತರ ನಾನು 2 ನೇ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತೇನೆ. ಸದರಿ ವಿಷಯ ಯುಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ದೂರನ್ನು ನೀಡಿದ ನಂತರ ನನಗೆ ತಿಳಿಯಿತು ಎಂದು ನುಡಿದಿರುತ್ತಾರೆ. ಮಾಧ್ಯಮದಲ್ಲಿ ನನ್ನ ಬಗ್ಗೆ ಅಪಪ್ರಚಾರವಾದದ್ದು ನಿಪಿ 1 ದೂರನ್ನು ನೀಡುವ ಪೂರ್ವದಲ್ಲಿ ಎಂದರೆ ಸರಿ. ಆನಂತರ ನನ್ನ ಬಗ್ಗೆ ಯಾವುದೇ ಅಪಪ್ರಚಾರವಾಗಿರುವುದಿಲ್ಲ.

7. ನಾನು ಹೇಳುವ 2 ನೇ ದೂರು ಅಂದರೆ ಇಂಗ್ಲೀಷಿನಲ್ಲಿ ನೀಡಿದ ದೂರು 2 ನೇ ಆರೋಪಿ ಯಾರು ಎಂದು ಗೊತ್ತಾದ ತಕ್ಷಣ ನೀಡಿರುತ್ತೇನೆ. ಸಾಕ್ಷಿಯು ಸ್ವತಃ ಮೊದಲು ನನಗೆ ವಾಟ್ಸ್ ಆಪ್ ನಲ್ಲಿ ನನಗೂ ಮತ್ತು ನಳಿನ್ ಕುಮಾರ್ ಕಟೀಲ್ ರವರಿಗೆ ಅನೈತಿಕ ಸಂಬಂಧ ಇದೆ ಎಂದು ವಾಟ್ಸ್ ಆಪ್ ನಲ್ಲಿ ಹರಿಯಬಿಟ್ಟಿರುತ್ತಾರೆ, ಆನಂತರ ನನಗೆ ಹಲವು ಕಡೆ ಅಶ್ಲೀಲ ಸಂದೇಶ ಬರಲು ಶುರುವಾಯಿತು. ನಾನು ಶಿರ್ವಾ ಪೊಲೀಸ್ ಠಾಣೆಯಿಲ್ಲಿ ನಿಪಿ 1 ರಂತೆ ದುಾರನ್ನು ನೀಡಿರುತ್ತೇನೆ, ದೂರನ್ನು ನೀಡಿದ ಅಂದಾಜು 1 ವಾರದಲ್ಲಿ ಸದರಿ ವಿಚಾರವನ್ನು ಪತ್ರ ಮಾಧ್ಯಮ, ಟಿವಿ ಮಾಧ್ಯಮದಲ್ಲಿ ಸಹ ಪ್ರಚಾರವಾಯಿತು. ನಂತರ ನನಗೆ ಸದರಿ ಪ್ರಚಾರ 1 ಮತ್ತು 2 ನೇ ಆರೋಪಿತರು ಸೇರಿಕೊಂಡು ಮಾಡಿರುತ್ತಾರೆ ಎಂದು ತಿಳಿಯಿತು, ಆನಂತರ ನಾನು 2 ನೇ

ಆರೋಪಿಯ ವಿರುದ್ಧ ಇಂಗ್ಲೀಷಿನಲ್ಲಿ ದೂರು ನೀಡಿರುತ್ತೇನೆ. ನಾನು ಇಂಗ್ಲೀಷಿನಲ್ಲಿ ನೀಡಿರುತ್ತೇನೆ ಎನ್ನಲಾದ ದೂರನ್ನು ನಮ್ಮ ವಕೀಲರಾದ ರಾಜೇಶ್ ರವರೊಂದಿಗೆ ಚರ್ಚಿಸಿ ಅವರು ಹೇಳಿದಂತೆ ಬರೆದು ನೀಡಿರುತ್ತೇನೆ ಎಂದರೆ ಸರಿಯಲ್ಲ.

8. 1 ನೇ ಆರೋಪಿಗೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಹಾಗೂ 2 ನೇ ಆರೋಪಿಗೂ ಶ್ರೀ ಪಿ ಪಿ ಹೆಗ್ಡೆ ವಕೀಲರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಕಳುಹಿಸಿರುವ ಮೆಸೇಜಿಗೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನೇ ಸದರಿ ಸಂದೇಶಗಳನ್ನು ಕಳುಹಿಸುತ್ತಾ ಮನರಂಜನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

9. ನಿಪಿ 5 ರಲ್ಲಿ ಹೇಳಿರುವ ಮೊಬೈಲ್ ಸಂಖ್ಯೆಗೆ ಸಂಭಾಷಣೆ ಮಾಡುವ ಸಮಯದಲ್ಲೇ ಫೋಟೋ ಕಳುಹಿಸಿರುವುದಿಲ್ಲ. 3 ತಿಂಗಳ ಸಂಭಾಷಣೆಯ ಮಧ್ಯದಲ್ಲಿ 2 ನೇ ಆರೋಪಿಯ ಭಾವಚಿತ್ರ ಬಂದಿರುತ್ತದೆ. ಹಾಗೆ ಭಾವಚಿತ್ರ ಬಂದ ಬಗ್ಗೆ ನಿಪಿ 5 ರಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಪಿ 6 ನಾನು ಕೊಟ್ಟಿರುವುದಿಲ್ಲ, ನಾನು ಭಾವಚಿತ್ರದ ಪ್ರಿಂಟನ್ನು ಕೊಟ್ಟಿರುತ್ತೇನೆ. 2 ನೇ ಆರೋಪಿಯ ಭಾವಚಿತ್ರವನ್ನು ದೂರನ್ನು ನೀಡುವಾಗಲೇ ನೀಡಿರುತ್ತೇನೆ. 2 ನೇ ಆರೋಪಿಯ ಭಾವಚಿತ್ರವು ಸಾಮಾಜಿಕ ಜಾಲತಾಣ ಗೂಗಲ್ ನಲ್ಲಿ ಸರ್ಚ್ ಮಾಡಿದರೆ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

10. 2 ನೇ ಆರೋಪಿ ನಿಮಗೆ ಕರೆ ಮಾಡಿರುತ್ತಾರಾ ಎಂದರೆ ಸಾಕ್ಷಿಯು ವಾಟ್ಸ್ ಆಪ್ ಕರೆ ಮಾಡಿರುತ್ತಾರೆ ಅದು ಫೆಬ್ರವರಿ ತಿಂಗಳಲ್ಲಿ ಬಂದಿರುತ್ತದೆ. ಸದರಿ ವಿಚಾರವನ್ನು ನಾನು ಮೀಡಿಯದಲ್ಲಿ ನನ್ನ ಬಗ್ಗೆ ಬಂದ ನಂತರ ನೀಡಿರುತ್ತೇನೆ. ಆ ರೀತಿ ಕರೆ ಬಂದಕೂಡಲೇ ನಾನು ಯಾರಿಗೂ ದೂರನ್ನು ನೀಡಿರುವುದಿಲ್ಲ. 2 ನೇ ಆರೋಪಿಗೂ ನನಗೂ ಯಾವುದೇ ದ್ವೇಷ ಹಾಗೂ ಹಗೆತನದ ಸಂಬಂಧ ಇಲ್ಲ ಹಾಗೂ 2 ನೇ ಆರೋಪಿಯು ನನಗೆ ಯಾವುದೇ ಸಂಭಾಷಣೆ ಹಾಗೂ ಕರೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ತಿಳಿಸಿರುವ ಮೊಬೈಲ್ ಸಂಖ್ಯೆ ಹಾಗೂ ಅದರಲ್ಲಿರುವ ಸಂಭಾಷಣೆಗೂ ಹಾಗೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

11. ನಿಮ್ಮ ವಕೀಲರಾದ ರಾಜೇಶರಿಗೂ 2 ನೇ ಆರೋಪಿಗೂ ವೃತ್ತಿ ಸಂಬಂಧ, ದ್ವೇಷ ಇದ್ದು ಆದ್ದರಿಂದ ನಿಮ್ಮನ್ನು ಉಪಯೋಗಿಸಿ 2 ನೇ ಆರೋಪಿಯ ವಿರುದ್ಧ ಸುಳ್ಳು ಆಪಾದನೆ ಪಟ್ಟಿಯನ್ನು ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಕೀಲ ರಾಜೇಶ್ ರವರು ಮಂಗಳೂರು ಬಾರಿನ ಸದಸ್ಯತ್ವದಿಂದ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಮೇಲೆ ಹಾಗೂ ಅವರ ವಕೀಲರ ಮೇಲೆ ಇರುವ ದ್ವೇಷದಿಂದ ನನ್ನ ವಕೀಲರನ್ನು ಬಳಸಿಕೊಂಡು 2 ನೇ ಆರೋಪಿಯ ವಿರುದ್ಧ ಸುಳ್ಳು ಆಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿ ಮತ್ತು ಭಾವಚಿತ್ರಗಳಲ್ಲಿ ಪೊಲೀಸರು ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 2 ನ್ನು ಪೊಲೀಸರ ಹೇಳಿಕೆಯ ಮೇರೆಗೆ ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸೃಷ್ಟಿಸಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ

ಇಲ್ಲ

ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಮೂರನೇ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ , ಉಡುಪಿ.